ಹೀಗೆ ಅವನ ಮನವು ಅತ್ತ ಇತ್ತ ಪ್ರವಹಿಸುತ್ತಾ ತನ್ನ ಒಳಾಂತರದ ಪ್ರಕ್ಷುಬ್ಧತೆಯನ್ನು ತಿಳಿಗೊಳಿಸುವ ಪ್ರಯತ್ನದಲ್ಲಿ ಇದ್ದಾಗಲೇ ಅವನ ನೋಟ ಕೋರ್ಟ್ ಹಾಲಿನ ಗೋಡೆಯ ಬದಿಯಲ್ಲಿ ಸಾಲಾಗಿ ಇರಿಸಿದ್ದ ಕುರ್ಚಿಗಳತ್ತ ಹರಿಯಿತು. ಕೂಡಲೇ ಅವನ ಮೆದುಳು ಬೆಳಗಿನಿಂದ ಕುದಿಯುತ್ತಿದ್ದ ಅವನ ಅಂತರಾಳದ ಜ್ವಾಲಾಮುಖಿಯ ಲಾವಾ ರಸಕ್ಕೆ ನಿಟ್ಟುಸಿರಿನ ಸಂಪರ್ಕ ಕಲ್ಪಿಸಿತು. ಇಬ್ಬರು ವಯಸ್ಸಾದ ಮಹಿಳೆಯರು ಮತ್ತು ಅವರ ಮಧ್ಯದಲ್ಲಿ ಕುಳಿತಿದ್ದ ಪುಟ್ಟ ಬಾಲೆಯತ್ತ ಅವನ ಗಮನ ಕೇಂದ್ರೀಕೃತವಾಯಿತು. ಆದೇಶದ ಹಾಳೆಯಲ್ಲಿ ಟೈಪಿಸ್ಟ್ ಕಂಪ್ಯೂಟರೀಕೃತ ಆದೇಶವನ್ನು ದಾಖಲಿಸುತ್ತಿದ್ದಾಗ ಅವನು ಅನೈಚ್ಛಿಕವಾಗಿ ಆ ಬಾಲೆಯತ್ತ ದೃಷ್ಟಿಯನ್ನು ಹಾಯಿಸುತ್ತಿದ್ದ. ಆ ಮಗುವು ಕುರ್ಚಿಯಿಂದ ಇಳಿದು ಫ್ರಾಕನ್ನು ಸರಿಪಡಿಸಿಕೊಳ್ಳುತ್ತಾ ಒಬ್ಬ ಮಹಿಳೆಯ ಕೈಯಲ್ಲಿದ್ದ ಬ್ಯಾಗನ್ನು ತಲಾಶ್ ಮಾಡತೊಡಗಿತು. ಅದರಲ್ಲಿದ್ದ ಸಾಮಗ್ರಿಗಳನ್ನು ಆಕೆ ಕೆಳಗೆ ಬೀಳಿಸುತ್ತಿದ್ದಾಗ ಆ ಹಿರಿಯ ಮಹಿಳೆ ಅವಳಿಂದ ಬಲವಂತವಾಗಿ ಬ್ಯಾಗನ್ನು ಕಸಿದುಕೊಂಡರು. ಆಹಾ! ಅವನ ನೆನಪಿನ ಕೋಶಗಳು ಜಾಗೃತಗೊಂಡವು. ಇದು ಯಾವ ಕೇಸು ಎಂದು ಅವನು ನೆನಪನ್ನು ಉದ್ದೀಪನಗೊಳಿಸಿದಾಗ ಒಮ್ಮೆಲೆ ಅವನ ಮನೋ ಪಟಲದ ಮೇಲೆ ಮೂಡಿದ್ದು ಜಯಶಂಕರ

